ಸಾಗರ ಮತಕ್ಷೇತ್ರದಲ್ಲಿ ಪ್ರವಾಹಕ್ಕೆ ಒಳಗಾದ ರಸ್ತೆ ಮತ್ತು ಸೇತುವೆಗಳ ದುರಸ್ತಿ

702 (890) ಶ್ರೀ ಗೋಪಾಲಕೃಷ್ಣ ಬೇಳೂರು (ಸಾಗರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾಗರ ಮತಕ್ಷೇತ್ರದಲ್ಲಿ ಪ್ರವಾಹದಿಂದಾಗಿ ಹಾನಿಗೊಳಗಾದ ರಸ್ತೆ ಮತ್ತು ಸೇತುವೆ ದುರಸ್ಥಿಗೆ ರೂ.3.00 ಕೋಟಿ ಅನುದಾನದ ಅವಶ್ಯಕತೆ ಇದ್ದು, ತುರ್ತಾಗಿ ರೂ.120.00 ಲಕ್ಷ ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಯನ್ನು ಸಲ್ಲಿಸಲಾಗಿದ್ದು, ಈ ಸಂಬಂಧ ಸರ್ಕಾರವು ತೆಗೆದುಕೊಂಡ ಕ್ರಮವೇನು?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಪ್ರವಾಹದಿಂದ ಹಾನಿಗೊಳಗಾಗುವ ರಸ್ತೆ ಮತ್ತು ಸೇತುವೆ ಕಾಮಗಾರಿಗಳನ್ನು ಜಿಲ್ಲಾಧಿಕಾರಿಗಳ ವಿಪತ್ತು ಪರಿಹಾರ ನಿಧಿಯಡಿ (CRF) ಕೈಗೊಳ್ಳಲಾಗುತ್ತದೆ.

ಅದರಂತೆ, ಸಾಗರ ತಾಲ್ಲೂಕಿನಲ್ಲಿ ಪ್ರವಾಹದಿಂದ ಹಾನಿಗೊಳಗಾದ ರಸ್ತೆ ಮತ್ತು ಸೇತುವೆಗಳ ದುರಸ್ತಿಗಾಗಿ ರೂ.246.00 ಲಕ್ಷಗಳ ಪ್ರಸ್ತಾವನೆ ಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗಿದ್ದು, ಅನುಮೋದನೆ ಮತ್ತು ಅನುದಾನ ಬಿಡುಗಡೆ ನಿರೀಕ್ಷಿಸಿದೆ.

ಸಾಗರದಲ್ಲಿ ಬಾಲಕರ ಪದವಿ ಕಾಲೇಜು ಪ್ರಾರಂಭ

703 (891) ಶ್ರೀ ಗೋಪಾಲಕೃಷ್ಣ (ಬೇಳೂರು) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯ ಸಾಗರ ಪಟ್ಟಣದ ಉಪ ವಿಭಾಗ ಕೇಂದ್ರದ ಜೊತೆಗೆ ಮೂರು ತಾಲ್ಲೂಕುಗಳ ಮಧ್ಯದಲ್ಲಿದ್ದು, ಗರಿಷ್ಟ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯಲು ಪ್ರಯತ್ನಿಸಿರುವುದು ಮತ್ತು ಈ ವಿದ್ಯಾರ್ಥಿ ಗಳಿಗಾಗಿ ಪದವಿ ಕಾಲೇಜು ಅವಶ್ಯವಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಕಾಲೇಜು ಮಂಜೂರಾತಿ ಸಂಬಂಧ ಸರ್ಕಾರದ ಕ್ರಮವೇನು; ಹೊಸ ಕಾಲೇಜಿಗೆ ಯಾವಾಗ ಮಂಜೂರಾತಿ ನೀಡಲಾಗುವುದು;

ಡಾ॥ ವಿ.ಎಸ್. ಆಚಾರ್ಯ (ಉನ್ನತ ಶಿಕ್ಷಣ ಸಚಿವರು) :

ಅ) ಬಂದಿದೆ.

ಆ) ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ಈಗಾಗಲೇ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ನಡೆಯುತ್ತಿದ್ದು, ವಿದ್ಯಾರ್ಥಿಗಳ ಸಂಖ್ಯೆ, ಜಮೀನಿನ ಲಭ್ಯತೆ ಹಾಗೂ ಅನುದಾನದ ಲಭ್ಯತೆ ಇವುಗಳನ್ನು ಆಧರಿಸಿ ಸರ್ಕಾರಿ ಪದವಿ ಕಾಲೇಜನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಸಾಗರ ಮತಕ್ಷೇತ್ರದ ಸುವರ್ಣ ಗ್ರಾಮ ಯೋಜನೆಗೆ ಹಣ ಬಿಡುಗಡೆ

704 (892) ಶ್ರೀ ಗೋಪಾಲಕೃಷ್ಣ ಬೇಲೂರು (ಸಾಗರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇದುವರೆವಿಗೂ ಸುವರ್ಣ ಗ್ರಾಮ ಯೋಜನೆಗೆ ಬಿಡುಗಡೆಯಾದ ಅನುದಾನ ಎಷ್ಟು; ಖರ್ಚಾಗಿರುವ ಅನುದಾನ ಎಷ್ಟು; ಉಳಿಕೆ ಅನುದಾನ ಎಷ್ಟು;

ಆ) ಸಾಗರ ವಿಧಾನಸಭಾ ಕ್ಷೇತ್ರಕ್ಕೆ ಈ ಯೋಜನೆಗೆ ಬಿಡುಗಡೆಯಾದ ಅನುದಾನ ಎಷ್ಟು; ಖರ್ಚಾಗಿರುವ ಅನುದಾನವೆಷ್ಟು; ಉಳಿಕೆಯಾಗಿರದ ಅನುದಾನವೆಷ್ಟು;

ಇ) ಈ ಯೋಜನೆ ಬಗ್ಗೆ ಸರ್ಕಾರದ ಮುಂದಿನ ಕ್ರಮವೇನು?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು) :

ಅ) ರಾಜ್ಯದಲ್ಲಿ ಇದುವರೆವಿಗೂ ಸುವರ್ಣ ಗ್ರಾಮೋದಯ ಯೋಜನೆಯಡಿ ಬಿಡುಗಡೆ, ಖರ್ಚು ಮತ್ತು ಉಳಿಕೆ ಅನುದಾನದ ವಿವರ:

(ರೂ.ಕೋಟಿಗಳಲ್ಲಿ)

ಬಿಡುಗಡೆ	ಖರ್ಚು	ಉಳಿಕೆ
1633.44	1445.78	187.66

ಆ) ಸಾಗರ ವಿಧಾನಸಭಾ ಕ್ಷೇತ್ರಕ್ಕೆ ಸುವರ್ಣ ಗ್ರಾಮೋದಯ ಯೋಜನೆಯಡಿ ಬಿಡುಗಡೆ, ಖರ್ಚು ಮತ್ತು ಉಳಿಕೆ ಅನುದಾನದ ವಿವರ: